ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ: 07.08.2017ರಂದು ನಡೆದ ಸಭೆಯ ನಡವಳಿಗಳು

ವಿಷಯದ ಸಂಖ್ಯೆ: ತೆಆಸ್ಥಾಸ/63/2017-18

ವಿಶೇಷ ಆಯುಕ್ತರು (ಯೋಜನೆ) ದಿನಾಂಕ 22-07-2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2016-17ರ ಆಯವ್ಯಯದಲ್ಲಿ ಲೆಕ್ಕ ಶೀರ್ಷಿಕೆ ಪಿ-3075 ಬೆಂಗಳೂರು ನಗರದ ಸಮಗ್ರ ಅಭಿವೃದ್ಧಿ ಕಾಮಗಾರಿಗಳು (ಬೆಂಗಳೂರು ನಗರ ಜಿಲ್ಲಾ ಉಸ್ತುವಾರಿ ಸಚಿವರ ವಿವೇಚನೆಗೆ ಒಳಪಟ್ಟ ಅನುದಾನ) ಅಡಿ ರೂ.25000.00 ಲಕ್ಷಗಳ ಅನುದಾನ ಮೀಸಲಿರಿಸಿದ್ದು, ನಗರ ಜಿಲ್ಲಾ ಉಸ್ತುವಾರಿ ಸಚಿವರ ಪತ್ರದಂತೆ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಅನುಮೋದನೆಯಂತೆ ಮಾನ್ಯ ಮೂಜ ಮಹಾಪೌರರ ಅನುದಾನದ ಲೆಕ್ಕ ಶೀರ್ಷಿಕೆ ಪಿ-190ಗೆ ರೂ.2000.00 ಲಕ್ಷಗಳ ಅನುದಾನವನ್ನು ಹೊಂದಾಣಿಕೆ ಮಾಡಲಾಗಿದೆ. ಹಾಗೂ ರೂ.21789.39 ಲಕ್ಷಗಳಿಗೆ ಜಾಬ್ ಸಂಖ್ಯೆ ನೀಡಲಾಗಿದೆ. ರೂ.50.00 ಲಕ್ಷಗಳ ಕಾಮಗಾರಿಗೆ ಜಾಬ್ ಸಂಖ್ಯೆ ನೀಡುವ ಬಗ್ಗೆ ಅನುಮೋದನೆಗೆ ಕಡತ ಸಲ್ಲಿಸಲಾಗಿದೆ. ಪ್ರಸ್ತುತ ಪಿ-3075 ರಡಿ ರೂ.1160.61 ಲಕ್ಷಗಳ ಅನುದಾನ ಲಭ್ಯವಿರುತ್ತದೆ. ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು ಸರ್ವಜ್ಞನಗರ ವಿಧಾನಸಭಾಕ್ಷೇತ್ರಕ್ಕೆ ರೂ.1500.00 ಲಕ್ಷಗಳಿಗೆ ಪಿ3075 ರಡಿ ಜಾಬ್ ಸಂಖ್ಯೆ ನೀಡುವ ಪತ್ರ ನೀಡಿದ್ದು, ಲಭ್ಯವಿರುವ ರೂ.1160.61 ಲಕ್ಷಗಳಿಗೆ ಸರ್ವಜ್ಞನಗರ ವಿಧಾನಸಭಾಕ್ಷೇತ್ರಕ್ಕೆ ಜಾಬ್ ಸಂಖ್ಯೆ ನೀಡಲು ಅನುಮೋದನೆ ಕೋರಲಾಗಿರುತ್ತದೆ. ಮೇಲ್ಕಂಡಂತೆ ಜಾಬ್ ಸಂಖ್ಯೆ ನೀಡಲಾದ ಮೊತ್ತಗಳಲ್ಲಿ ಜಿಲ್ಲಾ ಉಸ್ತುವಾರಿ ಸಚಿವರ ಅನುಪಸ್ಥಿತಿಯಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಸೂಚಿಸಿರುವ ರೂ.45.39 ಕೋಟಿಗಳ ಕಾಮಗಾರಿಗಳಿಗೆ ಜಾಬ್ ಸಂಖ್ಯೆ ನೀಡಲಾಗಿದ್ದು, ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು 2016-17ರ ರೂ.250.00 ಕೋಟಿಗಳಿಗೆ ಪತ್ರ ನೀಡಿ ಕೊರತೆ ಆಗುವ ರೂ.45.39 ಕೋಟಿಗಳ ಅನುದಾನ ಮುಂದಿನ ಆರ್ಥಿಕ ವರ್ಷ 2017-18ರ ಅನುದಾನ ಮರು ಹೊಂದಾಣಿಕೆ ಮಾಡಲು ಮಾನ್ಯ ಅಧ್ಯಕ್ಷರು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯವರಿಗೆ ಸೂಚಿಸಿರುತ್ತಾರೆ. 2016-17ನೇ ಸಾಲಿನ ದಿನಾಂಕಗಳಲ್ಲಿ 2017-18ನೇ ಸಾಲಿನ ಪಿ-3075 ರಡಿ ಜಾಬ್ ಸಂಖ್ಯೆ ನೀಡಲು ಮಾನ್ಯ ಬೆಂಗಳೂರು ನಗರ ಜಿಲ್ಲಾ ಉಸ್ತುವಾರಿ ಸಚಿವರು ಪತ್ರ ನೀಡಿರುವ ವಿವರ ಈ ಕೆಳಕಂಡಂತಿದೆ.

ಕ್ರಮ ಸಂಖ್ಯೆ	ಮಾನ್ಯ ಸಚಿವರ ಪತ್ರ ಸಂಖ್ಯೆ ದಿನಾಂಕ	ವಿಧಾನ ಸಭಾಕ್ಷೇತ್ರದ ಹೆಸರು	ಮೊತ್ತ (ರೂ.ಲಕ್ಷಗಳಲ್ಲಿ)
1		ಯಮ್ಲೂರ	1000.00
2	ಸಂಖ್ಯೆ:ಬೆಂಅ.&ನ.ಯೋ.ಸ/264/2016-17, ದಿ:06.02.2017	ದಾಸರಹಳ್ಳಿ	305.00
3		ಬೆಂಗಳೂರು ದಕ್ಷಿಣ	1000.00
4		ವಾರ್ಡ್ ನಂ.18 ರಾಧಕೃಷ್ಣದೇವಸ್ಥಾನ	200.00
5	ಸಂಖ್ಯೆ:ಬೆಂಅ.&ನ.ಯೋ.ಸ/254/2016-17, ದಿ:03.03.2017	ವಾರ್ಡ್ ನಂ.171 ಗುರಪ್ಪನಪಾಳ್ಯ	200.00
6		ವಾರ್ಡ್ ನಂ.82 ಗುಡ್ಡಾಪುರ ಪಾಳ್ಯ	300.00
7	ಸಂಖ್ಯೆ:ಬೆಂಅ.&ನ.ಯೋ.ಸ/267/2016-17, ದಿ:08.03.2017	ಲಿಂಗರಾಜಪುರ	100.00
8	ಸಂಖ್ಯೆ:ಬೆಂಅ.&ನ.ಯೋ.ಸ/283/2016-17, ದಿ:15.03.2017	ಶಿವಾಜಿನಗರ	25.00
9	ಸಂಖ್ಯೆ:ಬೆಂಅ.&ನ.ಯೋ.ಸ/83/2016-17, ದಿ:08.03.2017	ಬೆಳ್ಳಂದೂರು	100.00
	ಒಟ್ಟು ಮೊತ್ತ		3230.00

ಮೇಲ್ಕಂಡ ಮೊತ್ತಗಳನ್ನು ಅನುದಾನ ಹೊಂದಾಣಿಕೆ ಮಾಡುವ ಮೊತ್ತದಲ್ಲಿ ಜಾಬ್ ಸಂಖ್ಯೆ ನೀಡಲು ಹಾಗೂ 2017-18ನೇ ಸಾಲಿನ ಪಿ-3075ರಡಿ ಮೀಸಲಿರಿಸುವ ರೂ.200.00 ಕೋಟಿಗಳ ಮೊತ್ತದಲ್ಲಿ ಭರಿಸುವಂತೆ ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು ಸೂಚಿಸಿರುತ್ತಾರೆ. ರೂ.45.39 ಕೋಟಿಗಳ ಅನುದಾನವನ್ನು 2017-18ರ ಆಯವ್ಯಯದಲ್ಲಿ ಲೆಕ್ಕ ಶೀರ್ಷಿಕೆ ಪಿ-3975ಗೆ ರೂ.45.39 ಕೋಟಿ ಅನುದಾನ ಮರು ಹೊಂದಾಣಿಕೆ ಮಾಡಿಕೊಂಡು ಜಾಬ್ ಸಂಖ್ಯೆ ನೀಡಬೇಕಿದೆ. ಲೆಕ್ಕ ಶೀರ್ಷಿಕೆ ಪಿ-3075ಗೆ ರೂ.45.39 ಕೋಟಿಗಳ ಅನುದಾನ ಮರು ಹೊಂದಾಣಿಕೆ ಮಾಡಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಅನುಮೋದನೆಗಾಗಿ ಮಂಡಿಸಲಾದ ಟಿಪ್ಪಣಿ.

ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ 22-7-2017ರ ಟಿಪ್ಪಣಿಯನ್ನು ಒಪ್ಪುತ್ತಾ 2017-18ನೇ ಸಾಲಿನ ಆಯವ್ಯಯದ ವಿವಿಧ ಲೆಕ್ಕ ಶೀರ್ಷಿಕೆಗಳಲ್ಲಿ ಹಂಚಿಕೆ ಮಾಡಿರುವ ಅನುದಾನಗಳನ್ನು ಅಗತ್ಯತೆಗಳಿಗೆ ಅನುಗುಣವಾಗಿ ಪರಿಷ್ಕರಿಸಿ, ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಲೆಕ್ಕಶೀರ್ಷಿಕೆಗೆ ಮರು ಹೊಂದಾಣಿಕೆ ಮಾಡುವಂತೆ ಹಾಗೂ ಈ ಕೆಳಕಂಡ ಕೆಲವು ಲೆಕ್ಕ ಶೀರ್ಷಿಕೆಗಳಿಗೂ ಸಹ ಹೆಚ್ಚುವರಿ ಅನುದಾನವನ್ನು ವರ್ಗಾವಣೆ/ಮರುಹೊಂದಾಣಿಕೆ ಮಾಡಿ ಒದಗಿಸಲು ಆಯುಕ್ತರು ಕ್ರಮಕೈಗೊಳ್ಳುವುದೆಂದು, ಕೆ.ಎಂ.ಸಿ. ಕಾಯಿದೆ ಸೆಕ್ಷನ್ 172ರ ಅನ್ವಯ ಸಮಿತಿಯು ತೀರ್ಮಾನಿಸಿತು.

1. ಲೆಕ್ಕ ಶೀರ್ಷಿಕೆ ಪಿ.3075/116 ರಲ್ಲಿ ಮೀಸಲಿರಿಸಿರುವ ಚಾಲ್ತಿ ಕಾಮಗಾರಿಗಳ ಅನುದಾನದ ಮೊತ್ತವನ್ನು ರೂ.200.00 ಕೋಟಿಯಿಂದ ರೂ.245.39 ಕೋಟಿಗೆ ಪರಿಷ್ಕರಿಸುವುದು. ಲೆಕ್ಕ ಶೀರ್ಷಿಕೆ ಪಿ.311/54ರಲ್ಲಿ ಮೀಸಲಿರಿಸಿರುವ ಮೊತ್ತ ರೂ.5.00 ಕೋಟಿಗಳ ಅನುದಾನವನ್ನು ರೂ.39.00 ಕೋಟಿಗೆ ಪರಿಷ್ಕರಿಸುವುದು.

-***2

2. ಲೆಕ್ಕ ಶೀರ್ಷಿಕೆ ಪಿ.3316/107 ರಲ್ಲಿ ಮೀಸಲಿರಿಸಿದ ರೂ.80.00 ಕೋಟಿ ಅನುದಾನವನ್ನು [ಮೇಲಿನ ಅಧಿಸೂಚನೆಯಲ್ಲಿ ಪ್ರಸ್ತಾಪಿಸಿರುವ ಮೊತ್ತ ಅಂದರೆ ಸಂಖ್ಯೆ 87, 6, 10, 11, 30, 17, 26, 13, 79, 35 ರಲ್ಲಿ ರೂ.8.50 ಕೋಟಿಯಂತೆ] ರೂ.85.00 ಕೋಟಿಗೆ ಪರಿಷ್ಕರಿಸುವುದು.

3. ಲೆಕ್ಕ ಶೀರ್ಷಿಕೆ ಪಿ.190/115 ರಲ್ಲಿ ಮೀಸಲಿರಿಸಿರುವ ಮೊತ್ತ ರೂ.160.00 ಕೋಟಿ ಅನುದಾನವನ್ನು ರೂ.170.00 ಕೋಟಿಗೆ ಪರಿಷ್ಕರಿಸುವುದು. ಲೆಕ್ಕ ಶೀರ್ಷಿಕೆ ಪಿ.541/115 ರಲ್ಲಿ ಮೀಸಲಿರಿಸಿರುವ ರೂ.15.00 ಕೋಟಿ ಅನುದಾನವನ್ನು ರೂ.25.00 ಕೋಟಿಗೆ ಪರಿಷ್ಕರಿಸುವುದು. ಲೆಕ್ಕ ಶೀರ್ಷಿಕೆ ಪಿ.2415/116 ರಲ್ಲಿ ಮೀಸಲಿರಿಸಿರುವ ರೂ.50.00 ಕೋಟಿ ಅನುದಾನವನ್ನು ರೂ.90.00 ಕೋಟಿಗೆ ಪರಿಷ್ಕರಿಸುವುದು. ಲೆಕ್ಕ ಶೀರ್ಷಿಕೆ ಪಿ.3304/54 ರಲ್ಲಿ ಮೀಸಲಿರಿಸಿರುವ ರೂ.10.00 ಕೋಟಿಗಳ ಅನುದಾನವನ್ನು ರೂ.5.00 ಕೋಟಿಗೆ ಮಿತಗೊಳಿಸುವುದು.

4. ಲೆಕ್ಕ ಶೀರ್ಷಿಕೆ 3215/59 ರಲ್ಲಿ ಪ್ರಕಟಣೆ ಮತ್ತು ಮುದ್ರಣಕ್ಕೆ ರೂ.6.00 ಕೋಟಿ ಬಂದು ರೂ.30.00 ಕೋಟಿ ಮೀಸಲಿರಿಸಿದ್ದು, ಸದರಿ ಅನುದಾನವನ್ನು ಪ್ರಕಟಣೆ ಮತ್ತು ಮುದ್ರಣಕ್ಕೆ ರೂ.3.00 ಕೋಟಿಯಂತೆ ರೂ.15.00 ಕೋಟಿಗೆ ಸೀಮಿತಗೊಳಿಸುವುದು. ಲೆಕ್ಕ ಶೀರ್ಷಿಕೆ ಪಿ.3271/66 ರಲ್ಲಿ ಮೀಸಲಿರಿಸಿರುವ ರೂ.25.00 ಕೋಟಿ ಅನುದಾನವನ್ನು ಕಡಿತಗೊಳಿಸುವುದು.

5. ಲೆಕ್ಕ ಶೀರ್ಷಿಕೆ ಪಿ.3116/81 ರಲ್ಲಿ ರೂ.15.00 ಕೋಟಿ ಮೀಸಲಿರಿಸಿದ್ದು, ರೂ.10.00 ಕೋಟಿಗೆ ಸೀಮಿತಗೊಳಿಸುವುದು. ಲೆಕ್ಕ ಶೀರ್ಷಿಕೆ 0472/97 ರಲ್ಲಿ ಮೀಸಲಿರಿಸಿರುವ ರೂ.15.00 ಕೋಟಿಗಳನ್ನು ರೂ5.00 ಕೋಟಿಗೆ ಸೀಮಿತಗೊಳಿಸುವುದು.

6. ಲೆಕ್ಕ ಶೀರ್ಷಿಕೆ ಪಿ.3242/98 ರಲ್ಲಿ ರೂ.12.00 ಕೋಟಿ ಮೀಸಲಿರಿಸಿದ್ದು, ರೂ.10.00 ಕೋಟಿಗೆ ಸೀಮಿತಗೊಳಿಸುವುದು. ಲೆಕ್ಕ ಶೀರ್ಷಿಕೆ ಪಿ.3249/125 ರಲ್ಲಿ ರೂ.15.00 ಕೋಟಿ ಮೀಸಲಿರಿಸಿದ್ದು, ರೂ.9.00 ಕೋಟಿಗೆ ಸೀಮಿತಗೊಳಿಸುವುದು.

7. ಲೆಕ್ಕ ಶೀರ್ಷಿಕೆ ಪಿ.3302/125 ರಲ್ಲಿ ರೂ.6.00 ಕೋಟಿ ಮೀಸಲಿರಿಸಿದ್ದು, ರೂ.1.00 ಕೋಟಿಗೆ ಸೀಮಿತಗೊಳಿಸುವುದು. ಲೆಕ್ಕ ಶೀರ್ಷಿಕೆ ಪಿ.3207/51 ರಲ್ಲಿ ರೂ.5.00 ಕೋಟಿ ಮೀಸಲಿರಿಸಿದ್ದು, ರೂ.3.00 ಕೋಟಿಗೆ ಮಿತಗೊಳಿಸುವುದು.

8. ಲೆಕ್ಕ ಶೀರ್ಷಿಕೆ ಪಿ.3285/157 ರಲ್ಲಿ ರೂ.15.00 ಕೋಟಿ ಮೀಸಲಿರಿಸಿದ್ದು, ರೂ.10.00 ಕೋಟಿಗೆ ಮಿತಗೊಳಿಸುವುದು. ಲೆಕ್ಕ ಶೀರ್ಷಿಕೆ ಪಿ.3284/156 ರಲ್ಲಿ ರೂ.10.00 ಕೋಟಿ ಮೀಸಲಿರಿಸಿದ್ದು, ರೂ.7.00 ಕೋಟಿಗೆ ಮಿತಗೊಳಿಸುವುದು.

9. ಲೆಕ್ಕ ಶೀರ್ಷಿಕೆ ಪಿ.3324/137 ರಲ್ಲಿ ರೂ.35.00 ಕೋಟಿ ಮೀಸಲಿರಿಸಿದ್ದು, ರೂ.20.00 ಕೋಟಿಗೆ ಮಿತಗೊಳಿಸುವುದು. ಲೆಕ್ಕಶೀರ್ಷಿಕೆ ಪಿ.1808/98 ರಲ್ಲಿ ರೂ.10.00 ಕೋಟಿ ಮೀಸಲಿರಿಸಿದ್ದು ರೂ.8.00 ಕೋಟಿಗೆ ಮಿತಗೊಳಿಸುವುದು

10. ಲೆಕ್ಕ ಶೀರ್ಷಿಕೆ ಪಿ.3351/114 ರಲ್ಲಿ ರೂ.10.00 ಕೋಟಿ ಮೀಸಲಿರಿಸಿದ್ದು ರೂ.8.00 ಕೋಟಿಗೆ ಮಿತಗೊಳಿಸುವುದು ಮತ್ತು ಲೆಕ್ಕ ಶೀರ್ಷಿಕೆ ಪಿ.3158/134 ರಲ್ಲಿ ರೂ.67.06 ಕೋಟಿ ಮೀಸಲಿರಿಸಿದ್ದು ರೂ.30.06 ಕೋಟಿಗೆ ಸೀಮಿತಗೊಳಿಸುವುದು. ಲೆಕ್ಕ ಶೀರ್ಷಿಕೆ ಪಿ.3196/38 ರಲ್ಲಿ ರೂ.165.00 ಕೋಟಿ ಮೀಸಲಿರಿಸಿದ್ದು, ರೂ.140.00 ಕೋಟಿಗೆ ಸೀಮಿತಗೊಳಿಸುವುದು.

11. ಲೆಕ್ಕ ಶೀರ್ಷಿಕೆ ಪಿ.3305/77 ರಲ್ಲಿ ರೂ.30.00 ಕೋಟಿ ಮೀಸಲಿರಿಸಿದ್ದು, ರೂ.25.00 ಕೋಟಿಗೆ ಸೀಮಿತಗೊಳಿಸುವುದು. ಲೆಕ್ಕ ಶೀರ್ಷಿಕೆ ಪಿ.300/147 ರಲ್ಲಿ ರೂ.20.00 ಕೋಟಿ ಮೀಸಲಿರಿಸಿದ್ದು, ರೂ.15.00 ಕೋಟಿಗೆ ಸೀಮಿತಗೊಳಿಸುವುದು ಮತ್ತು ಲೆಕ್ಕ ಶೀರ್ಷಿಕೆ ಪಿ.1517/150 ರಲ್ಲಿ ರೂ.3.00 ಕೋಟಿ ಮೀಸಲಿರಿಸಿದ್ದು ರೂ.2.61 ಕೋಟಿಗೆ ಸೀಮಿತಗೊಳಿಸುವುದು.

ಕಾರ್ಯದರ್ಶಿ
ಹಣಕಾಸು ಇಲಾಖೆ (ಸಂಪನ್ಮೂಲ ಕ್ರೋಢೀಕರಣ ಮತ್ತು ಸಾಲ ನಿರ್ವಹಣೆ ಘಟಕ)
ಬೆಂಗಳೂರು

ಬಿ.ಬಿ.ಎಂ.ಪಿ ಕೇಂದ್ರ ಕಛೇರಿ ಪ್ರ.ಸಂ.ಕೇ.ಕ/ಕಂ.ತೆ/ಬಿ.ಬಿ.ಎಂ.ಪಿ/ಎಸ್.ಆರ್/350/08 ದಿನಾಂಕ: 19.12.2008 ರಲ್ಲಿ ಪಾರ್ಷದರ ವಾರ್ಡ್ ಸಂಖ್ಯೆ 19ಕ್ಕೆ ಮೀಸಲಿರಿಸಿರುವ ರೂ.4.00 ಕೋಟಿಗಳ ಅನುದಾನವನ್ನು ರೂ.14.00 ಕೋಟಿಗೆ ಮತ್ತು ವಾರ್ಡ್ ಸಂಖ್ಯೆ 171ಕ್ಕೆ ಮೀಸಲಿರಿಸಿರುವ ರೂ.20.00 ಕೋಟಿಗಳ ಅನುದಾನವನ್ನು ರೂ.30.00 ಕೋಟಿಗೆ ಮತ್ತು ವಾರ್ಡ್ ಸಂಖ್ಯೆ 103ಕ್ಕೆ ಮೀಸಲಿರಿಸಿರುವ ರೂ.13.00 ಕೋಟಿ ಅನುದಾನವನ್ನು ರೂ.18.00 ಕೋಟಿಗೆ ಹಚ್ಚಿಸುವುದು. ಹಾಗೂ ವಾರ್ಡ್ ಸಂಖ್ಯೆ 18ಕ್ಕೆ ರೂ.5.00 ಕೋಟಿ ಮೀಸಲಿರಿಸುವುದು.

ಕ್ರಮ ಸಂಖ್ಯೆ	ಶ್ರೀಯುತರುಗಳ ಹೆಸರು	ಪದನಾಮ	ನಿರ್ಣಯದ ಪರವಾಗಿ ಸಹಿ
01	ಎಂ.ಕೆ.ಗುಣಶೇಕರ್	ಅಧ್ಯಕ್ಷರು	
02	ಬಿ.ಎನ್.ನಿತೀಶ್ ಪುರುಷೋತ್ತಮ	ಸದಸ್ಯರು	
03	ಕೆ.ಎಂ.ಮಮತ	ಸದಸ್ಯರು	
04	ಜೆ.ಎನ್.ಶ್ರೀನಿವಾಸಮೂರ್ತಿ	ಸದಸ್ಯರು	
05	ಎಂ.ಮಹದೇವ	ಸದಸ್ಯರು	
06	ಪದ್ಮಾವತಿ ನರಸಿಂಹಮೂರ್ತಿ	ಸದಸ್ಯರು	
07	ಮಮತ ಕೆ.ಬಿ. ವಾಸುದೇವ	ಸದಸ್ಯರು	
08	ಎಂ.ಪದ್ಮಾವತಿ ಶ್ರೀನಿವಾಸ್	ಸದಸ್ಯರು	
09	ಎನ್.ಲೋಕೇಶ್	ಸದಸ್ಯರು	
10	ಎಂ.ಶಶಿರೇಖಾ	ಸದಸ್ಯರು	
11	ಬಿ.ಸುಮಂಗಲ	ಸದಸ್ಯರು	